# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-182 ಪದ್ಮನಾಭನಗರ, ಬೆಂಗಳೂರು

ಸಂ: ಸ.ಅ/ವಾ-182/ಪಿ.ಆರ್/206 /2022-23 ದಿನಾಂಕ : 21-10-2022

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಐ12(58)ಪಿಆರ್/35/2020-21 ದಿನಾಂಕ :21-09-2020 ರವರ ಆದೇಶದಂತೆ ದಿನಾಂಕ :21-10-2022 ರಂದು ವಾರ್ಡ್ ಸಂಖ್ಯೆ-182 ಪದ್ಮನಾಭನಗರದ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

*********

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಪದ್ಮನಾಭನಗರ ಬಡಾವಣೆ ವಾರ್ಡ್ ಸಂಖ್ಯೆ-182 ರವರಾದ ಶ್ರೀಮತಿ ಮಮತಎಲ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡಲ್ ಅಧಿಕಾರಿ ಶ್ರೀ ಚೇತನ್ ಎನ್ ಎಸ್ ನಾಯಕ್ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂಖ್ಯೆ | ವಿಷಯ | ಷರಾ |
|---|---|---|
| 1. | ದೊಡ್ಡ ಮಳೆ ನೀರು ಚರಂಡಿಗೆ ಸಂಪರ್ಕಿಸುವ ತೋಳು ಚರಂಡಿಗಳಿಗೆ 2 ಎಲ್ ಬೆಂಡ್‌ಗಳನ್ನು ಅಳವಡಿಸುವಂತೆ ಸಾರ್ವಜನಿಕರು ಕೋರಿದರು | ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳು ಮಾತನಾಡಿ ಕೂಡಲೇ ಅಳವಡಿಸುವುದಾಗಿ ಸಾರ್ವಜನಿಕರಿಗೆ ತಿಳಿಸಿದರು. |
| 2. | ಗೌಡನಪಾಳ್ಯದ ಶ್ರೀನಿವಾಸ ಚಿತ್ರಮಂದಿರ 1ನೇ ಮುಖ್ಯರಸ್ತೆ ಮತ್ತು 3ನೇ ಅಡ್ಡರಸ್ತೆಯಲ್ಲಿರುವ ಚರಂಡಿ ಹಾಗೂ ಕ್ರಾಂಕೀಟ್ ರಸ್ತೆಯನ್ನು ಕೂಡಲೇ ಸರಿಪಡಿಸುವಂತೆ ಸಾರ್ವಜನಿಕರು ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |
| 3. | ಟ್ರಾಫಿಕ್ ಪೋಲೀಸ್ ಸಿಬ್ಬಂದಿಗಳು ಪದ್ಮನಾಭನಗರದ ಮುಖ್ಯರಸ್ತೆ ರಸ್ತೆಗಳಲ್ಲಿ 8 ರಸ್ತೆಗುಂಡಿಗಳು ಕಂಡುಬಂದಿದ್ದು, ಅವುಗಳನ್ನು ಕೂಡಲೇ ಸರಿಪರಿಸುವಂತೆ ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |
| 4. | ಪೌರಕಾರ್ಮಿಕರು ಸರಿಯಾದ ರೀತಿಯಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಅವರಿಗೆ ತಿಳಿವಳಿಕೆ ನೀಡುವಂತೆ ಸಭೆಯಲ್ಲಿ ಕೋರಿದರು. | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಪದ್ಮನಾಭನಗರ ಉಪ. ವಿಭಾಗ (ಪರಿಸರ) ರವರ ಮುಂದಿನ ಕ್ರಮಕ್ಕಾಗಿ. |
| 5. | ದೊಡ್ಡಗೌಡನಪಾಳ್ಯದ ಹೊಂಗೆಮರದ ಹತ್ತಿರ ರಸ್ತೆ ಗುಂಡಿಗಳಾಗಿದ್ದು, ಅವುಗಳನ್ನು ಸರಿಪಡಿಸುವಂತೆ ಸಾರ್ವಜನಿಕರು ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |
| 6. | ಪದ್ಮನಾಭನಗರ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದಲ್ಲಿರುವ ಅಂಗಡಿಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿದರು. | ಸಭೆಯಲ್ಲಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಪಾದಚಾರಿ ಮಾರ್ಗದಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ದಿನಾಂಕವನ್ನು ನಿಗಧಿ ಪಡಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಸೂಚಿಸಿದರು. |

Scanned with OKEN Scanner

| | | |
|---|---|---|
| 7. | ಲಕ್ಷ್ಮಿಕಾಂತ ದೇವಸ್ಥಾನದ ಎದುರು ವಾಹನ ನಿಲುಗಡೆಯಿಂದ ಪಾದಚಾರಿಗಳಿಗೆ ತೊಂದರೆಯ ಬಗ್ಗೆ ಸಾರ್ವಜನಿಕರು ಕೋರಿದರು/ | ಸಂಚಾರಿ ಅರಕ್ಷಕ ವೃತ್ತ ನಿರೀಕ್ಷರು, ರವರ ಮುಂದಿನ ಕ್ರಮಕ್ಕಾಗಿ. |
| 8. | ವಾರ್ಡ್ ಪ್ರದೇಶದಲ್ಲಿ ಸೊಳ್ಳೆಗಳು ಹೆಚ್ಚಾಗಿದ್ದು, ಅವುಗಳನ್ನು ನಿಯಂತ್ರಿಸಲು ಔಷಧಿಯನ್ನು ಸಿಂಪಡಿಸಿಕೊಂಡುವಂತೆ ಸಾರ್ವಜನಿಕರು ಕೋರಿದರು. | ಆರೋಗ್ಯ ವೈಧ್ಯಾಧಿಕಾರಿಗಳು ಪದ್ಮನಾಭನಗರ ಉಪ ವಿಭಾಗ ರವರ ಮುಂದಿನ ಕ್ರಮಕ್ಕಾಗಿ. |
| 9. | ಮುಂದಿನ ಸಭೆಗೆ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ವಿಭಾಗದ ಅಧಿಕಾರಿಗಳು ಹಾಜರಾಗುವಂತೆ ಸಾರ್ವಜನಿಕರು ಕೋರಿದರು. | ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ) ವಿಭಾಗ ರವರ ಮುಂದಿನ ಕ್ರಮಕ್ಕಾಗಿ. |

ಸಭೆಯಲ್ಲಿ ಇತರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂ.- 206

ವಾರ್ಡ್ 182 ರ ನೋಡಲ್ ಅಧಿಕಾರಿ

Scanned with OKEN Scanner